**ಕರ್ನಾಟಕಸರ್ಕಾರ**
**ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**
ಫ್ಲಾಟ್ ನಂ. 1,2,3,4, ಕೆ.ಎಸ್.ಐ.ಐ.ಡಿ.ಸಿ, ರಾಜಾಜಿನಗರ ಐಟಿಪಾರ್ಕ್
5ನೇ ಮಹಡಿ, ಸೌತ್ ಬ್ಲಾಕ್, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು-10
**ದೂರವಾಣಿ ಸಂಖ್ಯೆ: 080-22372738, ಈ-ಮೇಲ್ : karnregs@gmail.com**

ಆರ್.ಡಿ.ಸಿ-ಇ.ಜಿ.ಎಸ್ /576/2022 (E-828791) ದಿನಾಂಕ: 08-09-2022

**ಇವರಿಗೆ,**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತಿ (ಬೆಳಗಾವಿ, ಗದಗ, ವಿಜಯನಗರ, ಬಳ್ಳಾರಿ, ಹಾಸನ, ಚಿಕ್ಕಮಗಳೂರು, ಬೆಂಗಳೂರು(ನಗರ), ಚಾಮರಾಜನಗರ, ಕೊಡಗು, ಉಡುಪಿ, ದಕ್ಷಿಣ ಕನ್ನಡ, ಮೈಸೂರು, ಯಾದಗಿರಿ, ಹಾವೇರಿ, ಧಾರವಾಡ, ಉತ್ತರ ಕನ್ನಡ)

**ಮಾನ್ಯರೇ,**

**ವಿಷಯ:** ಮಹಾತ್ಮ ಗಾಂಧಿ ನರೇಗಾ ಯೋಜನೆಯ **ಜಲ ಸಂಜೀವಿನಿ** ಕಾರ್ಯಕ್ರಮದಡಿ ಜಿಯೋ-ಸ್ಪೇಷಿಯಲ್ ತಂತ್ರಜ್ಞಾನಗಳನ್ನು ಬಳಸಿಕೊಂಡು ನೈಸರ್ಗಿಕ ಸಂಪನ್ಮೂಲ ನಿರ್ವಹಣೆ (NRM) ಕಾಮಗಾರಿಗಳ ವೈಜ್ಞಾನಿಕ ಯೋಜನಾ ವರದಿ (DPR) ತಯಾರಿಸಿ ಮತ್ತು ಅನುಷ್ಠಾನಗೊಳಿಸುವ ಬಗ್ಗೆ ಜಿಲ್ಲಾ ಮಟ್ಟದಲ್ಲಿ ತರಬೇತಿ ನೀಡುವ ಕುರಿತು.

**ಉಲ್ಲೇಖ:**
1. ಸಚಿವಾಲಯದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಆರ್.ಡಿ.ಸಿ-ಇ.ಜಿ.ಎಸ್ /576/2022, ದಿನಾಂಕ: 18-08-2022
2. ಈ ಕಛೇರಿಯ ಆದೇಶ ಸಂಖ್ಯೆ: ಆರ್.ಡಿ.ಸಿ-ಇ.ಜಿ.ಎಸ್ /576/2022, ದಿನಾಂಕ: 22-08-2022

*******

ಮಹಾತ್ಮ ಗಾಂಧಿ ನರೇಗಾ ಯೋಜನೆಯ ಜಲ ಸಂಜೀವಿನಿ ಕಾರ್ಯಕ್ರಮದಡಿ ವೈಜಾನಿಕವಾಗಿ ಸ್ಥಳಗಳನ್ನು ಗುರುತಿಸಿ, ಜಿಯೋ-ಸ್ಪೇಷಿಯಲ್ ತಂತ್ರಜ್ಞಾನಗಳನ್ನು ಬಳಸಿಕೊಂಡು ಸ್ಥಳಕ್ಕೆ ಅನುಗುಣವಾಗಿ ನೈಸರ್ಗಿಕ ಸಂಪನ್ಮೂಲ ನಿರ್ವಹಣಾ (NRM) ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ಷೇತ್ರ ಮಟ್ಟದ ಅಧಿಕಾರಿ/ಸಿಬ್ಬಂದಿಗಳಿಗೆ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ GIS ಸಂಪನ್ಮೂಲ ಸಿಬ್ಬಂದಿಗಳು, FES ಮತ್ತು GIZ ಸಂಸ್ಥೆಗಳಿಂದ ಆಯಾ ಜಿಲ್ಲೆಗಳಲ್ಲಿ Master Trainers ಗಳಾಗಿ ಆಯ್ದ ಸಿಬ್ಬಂದಿಗಳಿಗೆ (EO, ACF, AD, AD-A, AEE/AE/JE, PDO's, SADH, ADPC, NRDMS, DIEC, TC/TAE) ಸಾಮರ್ಥ್ಯಭಿವೃದ್ಧಿ ತರಬೇತಿಯನ್ನು ನೀಡುವುದು ಪ್ರಥಮ ಆದ್ಯತೆಯಾಗಿರುತ್ತದೆ.

**ಜಲ ಸಂಜೀವಿನಿ** ಕಾರ್ಯಕ್ರಮದ ಮೊದಲ ಭಾಗವಾಗಿ ಈಗಾಗಲೇ 15 ಜಿಲ್ಲೆಗಳಿಗೆ ದಿನಾಂಕ: 02-09-2022 ರಿಂದ 08-09-2022ರ ವರೆಗೆ ವಿವಿಧ ಹಂತದಲ್ಲಿ ವಿಭಾಗವಾರು ತರಬೇತಿಯನ್ನು ನೀಡಲಾಗಿರುತ್ತದೆ. ಮುಂದುವರೆದು ಇನ್ನುಳಿದ 16 ಜಿಲ್ಲೆಗಳಿಗೂ (ಬೆಳಗಾವಿ, ಗದಗ, ವಿಜಯನಗರ, ಬಳ್ಳಾರಿ, ಹಾಸನ, ಚಿಕ್ಕಮಗಳೂರು, ಬೆಂಗಳೂರು(ನಗರ), ಚಾಮರಾಜನಗರ, ಕೊಡಗು, ಉಡುಪಿ, ದಕ್ಷಿಣ ಕನ್ನಡ, ಮೈಸೂರು, ಯಾದಗಿರಿ, ಹಾವೇರಿ, ಧಾರವಾಡ, ಉತ್ತರ ಕನ್ನಡ) ಕೂಡ ತರಬೇತಿಯನ್ನು ನೀಡಿ, ಕಾರ್ಯಕ್ರಮವನ್ನು ಮುಂದಿನ ಆರ್ಥಿಕ ವರ್ಷದಿಂದ (2023-24) ರಾಜ್ಯ ವ್ಯಾಪ್ತಿ ಅನುಷ್ಠಾನ ಮಾಡಲು ನಿರ್ಧರಿಸಲಾಗಿದೆ. ತರಬೇತಿ ಕಾರ್ಯಕ್ರಮದಲ್ಲಿ ಆಯ್ಕೆ ಮಾಡಲಾದ ಪ್ರತಿ ಜಿಲ್ಲೆಯ ತಾಲೂಕಿನ ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನಿಸಬಹುದಾದ (NRM) ಕಾಮಗಾರಿಗಳನ್ನು ವೈಜಾನಿಕವಾಗಿ ಗುರುತಿಸಿ DPR ಅನ್ನು ತಯಾರಿಸುವ ಕುರಿತು ತರಬೇತಿಗೊಳಿಸಲಾಗುವುದು.

ಈಗಾಗಲೇ 2019 ರಿಂದ ಜಿಲ್ಲಾ ತಾಂತ್ರಿಕ ಸಿಬ್ಬಂದಿಗಳಿಗೆ (NRDMS, TC, TAE) GIS Planning ಕುರಿತು ತರಬೇತಿ ನೀಡಲಾಗಿರುತ್ತದೆ. ಪ್ರಸ್ತುತ ಕಾರ್ಯಕ್ರಮವನ್ನು ಶತ ಪ್ರತಿಶತ ವೈಜ್ಞಾನಿಕವಾಗಿ NRM ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳಿಗೆ ಸಾಮರ್ಥ್ಯಭಿವೃದ್ಧಿ ತರಬೇತಿಯನ್ನು ನೀಡಲಾಗುತ್ತಿದೆ.

ಸದರಿ ತರಬೇತಿಗೆ **ಉತ್ತಮ ತಾಂತ್ರಿಕ ಜ್ಞಾನ, ವಾಕ್ ಚಾತುರ್ಯ ಹೊಂದಿರುವ ಹಾಗೂ ಕ್ಷೇತ್ರಮಟ್ಟದಲ್ಲಿ ಪ್ರವಾಸ ಮಾಡಿ ತರಬೇತಿ ನೀಡಲು ಸಧೃಡವಿರುವ ಅಧಿಕಾರಿ/ಸಿಬ್ಬಂದಿಗಳನ್ನು** ಅನುಬಂಧ-I ರಂತೆ ಆಯ್ಕೆ ಮಾಡಿ ಸಾಮರ್ಥ್ಯಾಭಿವೃದ್ಧಿ ತರಬೇತಿಗೆ ಕಡ್ಡಾಯವಾಗಿ ನಿಯೋಜಿಸುವುದು ಮತ್ತು ಆಯ್ಕೆ ಮಾಡಲಾದ ಅಧಿಕಾರಿ/ಸಿಬ್ಬಂದಿಗಳ ವಿವರಗಳನ್ನು ಆಯುಕ್ತಾಲಯಕ್ಕೆ ಸಲ್ಲಿಸುವುದು (ಅನುಬಂಧ-II ರಂತೆ). ಸದರಿ ಅಧಿಕಾರಿ/ಸಿಬ್ಬಂದಿಗಳು ಮುಂದಿನ ದಿನಗಳಲ್ಲಿ Master Trainer's ಗಳಾಗಿ ಎಲ್ಲಾ ಹಂತಗಳಲ್ಲಿ (ಜಿಲ್ಲಾ, ತಾಲ್ಲೂಕು ಹಾಗು ಗ್ರಾ. ಪಂ. ಮಟ್ಟದಲ್ಲಿ) ತರಬೇತಿ ನೀಡಿ ಸೂಕ್ತ ನಿರ್ದೇಶನ ನೀಡಲು ತಿಳಿಸಲಾಗಿದೆ. (ನಿವೃತ್ತಿಯ ಅಂಚಿನಲ್ಲಿರುವ ಅಧಿಕಾರಿಗಳನ್ನು ನಿಯೋಜಿಸ ಕೂಡದು)

ಮುಂದುವರೆದು ತಾಲ್ಲೂಕು ಮಟ್ಟದಲ್ಲಿ **ಜಲ ಸಂಜೀವಿನಿ** ಕಾರ್ಯಕ್ರಮದಡಿ ಸೂಕ್ತ ತರಬೇತಿಯನ್ನು ನೀಡಲು ಜಿಲ್ಲಾ ಮಟ್ಟದಲ್ಲಿ ವೇಳಾಪಟ್ಟಿ ತಯಾರಿಸಿ, **ಸೆಪ್ಟೆಂಬರ್ 30 ರ ಒಳಗೆ** ತರಬೇತಿ ಆಯೋಜನೆಗೆ ಕ್ರಮವಹಿಸಿ ಮತ್ತು **ಸೆಪ್ಟೆಂಬರ್ ಕೊನೆಯ ವಾರದಿಂದ** (26 ರಿಂದ) ಜಿಯೋ-ಸ್ಪೇಷಿಯಲ್ ತಂತ್ರಜ್ಞಾನಗಳನ್ನು ಬಳಸಿ NRM ಕಾಮಗಾರಿಗಳ ವೈಜ್ಞಾನಿಕ ಯೋಜನಾ ವರದಿ (DPR) ತಯಾರಿಕೆ ಮತ್ತು ಅನುಷ್ಠಾನದ ಮಹತ್ವ ಮತ್ತು ಅಗತ್ಯತೆ ಬಗ್ಗೆ ಜನಪ್ರತಿನಿಧಿಗಳಿಗೆ/ರೈತರಿಗೆ/ಕೂಲಿ ಕಾರ್ಮಿಕರಿಗೆ/ಪ್ರತಿ ಗ್ರಾಮದ ಜನತೆಗೆ ಮನದಟ್ಟು ಮಾಡಲು IEC ಚಟುವಟಿಕೆಗಳನ್ನು ಆಯೋಜಿಸುವುದು ಹಾಗೂ ಸದರಿ ವಿವರಗಳನ್ನು ಆಯುಕ್ತಾಲಯಕ್ಕೆ ಸಲ್ಲಿಸಲು ತಿಳಿಸಲಾಗಿದೆ.

ಸದರಿ ತರಬೇತಿ ಆಗಮಿಸುವ ರಾಜ್ಯ ತಂಡದ ಅಧಿಕಾರಿ/ಸಿಬ್ಬಂದಿಗಳು/ಸಂಪನ್ಮೂಲ ವ್ಯಕ್ತಿಗಳಿಗೆ ಸಂಬಂಧಪಟ್ಟ ಸ್ಥಳೀಯ ಜಿಲ್ಲಾ ಪಂಚಾಯತಿಗಳು/ ಸಂಸ್ಥೆಗಳು ಸೂಕ್ತ ವ್ಯವಸ್ಥೆ (ವಾಹನ, ವಸತಿ ಹಾಗೂ ಊಟ) ಕಲ್ಪಿಸಲು ಕ್ರಮ ವಹಿಸುವುದು ಮತ್ತು ತರಬೇತಿ ಆಯೋಜನೆಗೆ ಸ್ಥಳೀಯವಾಗಿ ಇಬ್ಬರು ಅಧಿಕಾರಿ/ಸಿಬ್ಬಂದಿಗಳನ್ನು(DIEC/TC) ನಿಯೋಜಿಸಿ ಅಗತ್ಯ ಸಹಕಾರ ನೀಡುವುದು.

ಮುಂದಿನ ದಿನಗಳಲ್ಲಿ ಸದರಿ ವಿಷಯದ ಕುರಿತು ವಿಸ್ತೃತವಾದ ತರಬೇತಿಯನ್ನು ಗ್ರಾಮ ಪಂಚಾಯಿತಿ ಮಟ್ಟದ ಅಧ್ಯಕ್ಷರು/ಉಪಾಧ್ಯಕ್ಷರು/ಸದಸ್ಯರು ಗಳಿಗೆ ಮತ್ತು ಸಿಬ್ಬಂದಿಗಳಿಗೆ ರಾಜ್ಯ ತಂಡದಿಂದ SATCOM ತರಬೇತಿಯನ್ನು ಆಯೋಜಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:

1. ಶ್ರೀ ಶಿವಾನಂದ ಔರಾದೆ, ಸಹಾಯಕ ನಿರ್ದೇಶಕರು - 9480850007
2. ಶ್ರೀ ವಿನಾಯಕ್ ಎಸ್, ಯುವ ವೃತ್ತಿಪರರು - 9986185828

ಸದರಿ ತರಬೇತಿಯ ವಿವರಗಳನ್ನು ಅನುಬಂಧಗಳಲ್ಲಿ ಲಗತ್ತಿಸಿದೆ.

ತಮ್ಮ ವಿಶ್ವಾಸಿ,

**ಆಯುಕ್ತರು, ಗ್ರಾಮೀಣಾಭಿವೃದ್ಧಿ**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳಿಗೆ.
2. ನಿರ್ದೇಶಕರು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಂಸ್ಥೆ, ಮೈಸೂರು.
3. ಜಂಟಿ ನಿರ್ದೇಶಕರು(ತಾಂತ್ರಿಕ/ಆಡಳಿತ/ತೋಟಗಾರಿಕೆ) ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4. ಸಹಾಯಕ ನಿರ್ದೇಶಕರು(ಆಡಳಿತ/1/2/3) ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
5. ರಾಜ್ಯ ಕಛೇರಿಯ ಜಿಐಎಸ್ ತಂಡದ ಸಿಬ್ಬಂದಿಗಳಿಗೆ ಅಗತ್ಯ ಕ್ರಮಕ್ಕಾಗಿ.

## Annexure-I

## PHASE- II Training Schedule

| Scientific Planning - Schedule of Calendar for Training | | | | | | | |
|---|---|---|---|---|---|---|---|
| **Groups** | **District** | **No of Taluk** | **Date** | **Venue** | **No of Particip ants (Minimum)** | **Grand Total** | **Speakers (Rural Development Commissionerate/ GIZ/FES)** |
| Group 1 | **Belagavi** | 14 | **14.09.2022 - 15.09.2022** | **AIILSG, Belagavi** | **40** | **40** | **RDC:** JD/AD, Sowmya, Abhiram |
| Group 2 | **Gadag** | 6 | **14.09.2022 - 15.09.2022** | **RDPR University, Gadag** | **20** | **60** | **RDC:** JD/AD, Pooja, Vinayak |
| | **Vijayanagar** | 6 | | | **20** | | |
| | **Ballari** | 5 | | | **20** | | |
| Group 3 | **Bengaluru Urban** | 5 | **16.09.2022 - 17.09.2022** | **SIRD, Mysore** | **10** | **40** | **RDC: JD/AD,** Pooja, Vinayak, Adarsh & Vinaya |
| | **Chamarajanagar** | 5 | | | **20** | | |
| | **Kodagu** | 3 | | | **10** | | |
| Group 4 | **Hassan** | 8 | **19.09.2022 - 20.09.2022** | **SIRD, Mysore** | **20** | **40** | **RDC: JD/AD,** Pooja, Vinayak, Adarsh & Vinaya |
| | **Chikkamagaluru** | 8 | | | **20** | | |
| Group 5 | **Udupi** | 7 | **21.09.2022 - 22.09.2022** | **SIRD, Mysore** | **20** | **60** | **RDC: JD/AD,** Pooja, Vinayak & Vinaya |
| | **Dakshina Kannada** | 9 | | | **20** | | |
| | **Mysore** | 8 | | | **20** | | |
| Group 6 | **Yadgir** | 7 | **19.09.2022 - 20.09.2022** | **CEDOK, Dharwad** | **20** | **40** | **RDC: JD/AD,** Abhiram, Phani & Sowmya |
| | **Haveri** | 8 | | | **20** | | |
| Group 7 | **Dharwad** | 7 | **21.09.2022 22.09.2022** | | **20** | **40** | |
| | **Uttar Kannada** | 12 | | | **20** | | |

| | | |
|---|---|---|
| **2 days Training** | **DAY 1** | Theoretical Training on:<br>1. Water Shed Concept,<br>2. Water Budgeting,<br>3. PRA Techniques,<br>4. GIS Planning. |
| | **DAY 2** | Resource Mapping.<br>Practical Presentation from each district considering 1 G.P. as an Example. (**All are instructed to bring the Laptops Compulsorily**) |
| **NOTE** | **District Level Master Trainers** | |
| | EO(2), AD(4), AD-A (2), AEE/AE/JE (1), Best PDO's (2), SADH(1), ACF(1), ADPC, NRDMS, DIEC,TC/TAE (4) | |

# ಅನುಬಂಧ-II

**ಜಿಲ್ಲಾ ಮಟ್ಟದ ತರಬೇತಿಗೆ**
(ಗ್ರಾಮೀಣಾಭಿವೃದ್ಧಿ ಆಯುಕ್ತಾಲಯಕ್ಕೆ ಸಲ್ಲಿಸಬೇಕಾದ ನಮೂನೆ)

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ತಾಲ್ಲೂಕು ಹೆಸರು | ಪಂಚಾಯಿತಿ ಹೆಸರು | ಅಧಿಕಾರಿ / ಸಿಬ್ಬಂದಿ ಹೆಸರು | ಪದನಾಮ (EO,AD MGNREGA, AD-Agri, AEE/AE/JE, PDO, ADPC, NRDMS,TC, TA-Civil,Agri, Horti) | ದೂರವಾಣಿ ಸಂಖ್ಯೆ | ಇ ಮೇಲ್ |
|---|---|---|---|---|---|---|---|
| | | | | | | | |
| | | | | | | | |
| | | | | | | | |

**ವಿಶೇಷ ಸೂಚನೆ:**

1. ಪತ್ರದಲ್ಲಿ ತಿಳಿಸಿರುವ ಅಧಿಕಾರಿ/ಸಿಬ್ಬಂದಿಗಳನ್ನು ನಿಯೋಜಿಸುವುದು.
2. ಅಧಿಕಾರಿ /ಸಿಬ್ಬಂದಿಗಳ ವಿವರವನ್ನು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯಕ್ಕೆ ಪತ್ರದ ಮುಖಾಂತರ ಸಲ್ಲಿಸುವುದು (ಇ ಮೇಲ್ - gisplankarnataka@gmail.com)

# ಅನುಬಂಧ-III

**ತಾಲ್ಲೂಕು ಮಟ್ಟದ ತರಬೇತಿಗೆ**
(ಗ್ರಾಮೀಣಾಭಿವೃದ್ಧಿ ಆಯುಕ್ತಾಲಯಕ್ಕೆ ಸಲ್ಲಿಸಬೇಕಾದ ನಮೂನೆ)

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ತಾಲ್ಲೂಕು ಹೆಸರು | ಪಂಚಾಯಿತಿ ಹೆಸರು | ಅಧಿಕಾರಿ / ಸಿಬ್ಬಂದಿ ಹೆಸರು | ಪದನಾಮ (EO,AD MGNREGA,AD-Agri, AEE/AE/JE, PDO,TC ,TA - Civil,Agri, Horti, BFT, SHG & GKM ) | ತರಬೇತಿ ದಿನಾಂಕ | ದೂರವಾಣಿ ಸಂಖ್ಯೆ | ಇ ಮೇಲ್ |
|---|---|---|---|---|---|---|---|---|
| | | | | | | | | |
| | | | | | | | | |
| | | | | | | | | |

**ವಿಶೇಷ ಸೂಚನೆ:**

1. ಸೆಪ್ಟಂಬರ್ 8 ರಿಂದ 23ರೊಳಗೆ ತರಬೇತಿಯನ್ನು ಕಡ್ಡಾಯವಾಗಿ ಮುಕ್ತಾಯಗೊಳಿಸುವುದು.
2. ತರಬೇತಿಯ ವಿವರವನ್ನು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯಕ್ಕೆ ಪತ್ರದ ಮುಖಾಂತರ ಸಲ್ಲಿಸುವುದು (ಇ ಮೇಲ್ - gisplankarnataka@gmail.com)